ಶ್ರೀ ಕೆ. ಟಿ. ರಾಥೋಡ್.--ಇಂಥಾ ಸಂಧರ್ಭದಲ್ಲಿ ಮುನಿಸಿಪಾಲಟಿಯವರು ಮುಂದೆ ಬಂದು ಅವರು ತಮ್ಮ ಭಾಗದ ವಂತಿಕೆಯನ್ನು ಕೊಡುವುದಾದರೆ ಆ ಆಸ್ಪತ್ರೆಯನ್ನು ಅಪ್‌ಗ್ರೇಡ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಕೆ. ಎಚ್. ಹನುಮೇಗೌಡ.—ನ್ಯಾಯವಿ ಈ ಪ್ರಶ್ನೆಗೆ ಕೊಟ್ಟಿರತಕ್ಕ ಉತ್ತರದಲ್ಲಿ ತಾಲ್ಲೂಕು ಆಸ್ಪತ್ರೆಗೆ ಔಷಧಿಯನ್ನು ಕೊಂಡುಕೊಳ್ಳುವ ಸಲುವಾಗಿ ಒಂದು ವರ್ಷಕ್ಕೆ 10 ಸಾವಿರ ರೂಪಾಯಿ ಇದ್ದದ್ದನ್ನು 15 ಸಾವಿರ ರೂಪಾಯಿಗಳಿಗೆ ಏರಿಸಲಾಗಿದೆ ಎಂದು ಹೇಳಿದ್ದೀರಿ, ಆದರೆ ಆ ರೀತಿ ಆಸ್ಪತ್ರೆಗಳಿಗೆ ಔಷಧಿಗಳನ್ನು ಕೊಂಡುಕೊಳ್ಳುವ ಸಲುವಾಗಿ ಕೊಡತಕ್ಕ ಹಣವನ್ನು ವರ್ಷದ ಪ್ರಾರಂಭದಲ್ಲಿ ಕೊಡವೆ ವರ್ಷದ ಮಧ್ಯದಲ್ಲಿ ಕೊಡುತ್ತಾರೆ. ಇದರಿಂದಾಗಿ ವರ್ಷದ ಪ್ರಾರಂಭದಲ್ಲಿ 6—7 ತಿಂಗಳು ಔಷಧಿ ಇಲ್ಲದೆ ತೊಂದರೆಯಾಗುತ್ತದೆ. ಆದ್ದರಿಂದ ಆಸ್ಪತ್ರೆಗಳಲ್ಲಿ ಔಷಧಿಯನ್ನು ಕೊಂಡುಕೊಳ್ಳಲು ಪ್ರತಿತಿಂಗಳು ಇಷ್ಟಿಷ್ಟು ಹಣ ಎಂದು ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತಿರಾ ?

ಶ್ರೀ ಕೆ. ಟಿ. ರಾಥೋಡ್.—ತಮ್ಮ ಸಲಹೆಯನ್ನು ಗಮನಕ್ಕೆ ತೆಗೆದುಕೊಳ್ಳುತ್ತೇವೆ.

ಶ್ರೀ ಎ. ಶರಣಪ್ಪ.—ಆಸ್ಪತ್ರೆಗಳಿಗೆ ಔಷಧಿಯನ್ನು ಕೊಂಡುಕೊಳ್ಳಲು ವರ್ಷಕ್ಕೆ 10 ಸಾವಿರ ರೂಪಾಯಿಗಳಿದ್ದದ್ದನ್ನು 15 ಸಾವಿರ ರೂಪಾಯಿಗಳಿಗೆ ಏರಿಸಲಾಗಿದೆ ಎಂದು ಹೇಳಿದಿರಿ, ಆದರೆ ಪಾಸ್ತವವಾಗಿ ದೇವದುರ್ಗ ಆಸ್ಪತ್ರೆಯಲ್ಲಿ ಬ್ಯಾಂಡೇಜ್ ಬಟ್ಟೆ ಇಲ್ಲದೆ ರೋಗಿಗಳಿಗೆ ತೊಂದರೆಯಾಗಿದೆ. ಈ ಬಗ್ಗೆ ತಾವು ಆಸ್ಪತ್ರೆಯಿಂದ ವರದಿಯನ್ನು ತರಿಸಿಕೊಂಡಿದ್ದೀರಾ ?

ಶ್ರೀ ಕೆ. ಟಿ. ರಾಥೋಡ್.—ಈಗ ನನಗೆ ಬಂದಿರುವ ವರದಿಯ ಪ್ರಕಾರ ಅಲ್ಲಿ ವ್ಯವಸ್ಥೆ ನರಿಯಾಗಿದೆ ಎಂದು ಬಂದಿದೆ. ಒಂದುವೇಳೆ ಅದರಲ್ಲಿ ಏನಾದರೂ ಲೋಪದೋಷಗಳು ಕಂಡುಬಂದರೆ ಅದನ್ನು ಸರ್ಕಾರದ ಗಮನಕ್ಕೆ ತಂದರೆ, ಅದನ್ನು ಸರ್ಕಾರದವರು ಪರಿಶೀಲನೆ ಮಾಡುತ್ತಾರೆ.

N. R. W. S. Scheme for Sadalga Village

37. Sri J. S. AMMANNAVAR (Sadalga) —

Will the Minister for Law and Municipal Administration be pleased to state :—

(*a*) the population of the village Sadalga in Chikodi Taluk ;

(*b*) the year in which the National Rural Water Supply Scheme was sanctianed to the said village ;

(*c*) the year in which the work was started and the year-wise break-up of the expenditure incurred till 1974 ;

(*d*) whether the scheme has been completed ;

(*e*) if not, the reasons for the delay in completing the same and the steps proposed to be taken to complete ?

Sri D. K. NAIKAR (Minister for Law and Municipal Administration) —.

(*a*) The population is 12,508 souls as per 1971 census.

(*b*) June 1969.

(*c*) 1970

(SRI D. K. NAIKAR)

The yearwise expenditure is as follows :

		Rs. P.
1970—71	...	78,022-00
1971—72	...	1,16,181-00
1972—73	...	22,437-00
1973—74	...	9,061-00

(*d*) No.

(e) The reasons for the delay in completion of the scheme are due to—

(i) non-availability of land for the head works ; Land Acquisition dispute.

(ii) non-existence of proper approach road to the work site for vehicles to carry materials.

(iii) modification in the design of the S. R.

(iv) failure on the part of the contractors to complete the works within the stipulated time.

Necessary steps have been taken to complete the balance work.

ಶ್ರೀ ಜೆ. ಎಸ್. ಅಮ್ಮಣ್ಣನವರ್.—ಸ್ವಾಮಿ, ನನ್ನ (ಉ) ಪ್ರಶ್ನೆಗೆ ಕೊಟ್ಟಿರತಕ್ಕೆ ಉತ್ತರ ಸತ್ಯಕ್ಕೆ ದೂರವಾದುದು ಎಂದು ನನ್ನ ಅಭಿಪ್ರಾಯ. ಈ ಸಾದಲಗ ಗ್ರಾಮಕ್ಕೆ ರಾಷ್ಟ್ರೀಯ ಗ್ರಾಮಾಂತರ ನೀರು ಸರಬರಾಜು ಮಾಡುವ ಯೋಜನೆ ಏನಿದೆ ಇದು 1970ನೇ ಇಸವಿಯಲ್ಲಿ ಪ್ರಾರಂಭವಾಯಿತು. 1975ನೇ ಇಸವಿ ಬಂದರೂ ಅದು ಇನ್ನೂ ಕಾರ್ಯಗತವಾಗದಿದ್ದರೆ ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಿದ್ದು ಅನ್‌ಪ್ರೊಡಕ್ಟೀವ್ ಆಗಿ ವ್ಯರ್ಥವಾಗುತ್ತದೆ. ಇಂಥಾ ಯೋಜನೆಯನ್ನು ಸೂಕ್ತ ಕಾರಾವಧಿ ಮಿತಿಯಲ್ಲಿ ಪೂರ್ತಿ ಮಾಡುವ ಕಡೆ ಸರ್ಕಾರದವರು ಗಮನಕೊಡುವುದಕ್ಕೆ ಯೋಚನೆ ಮಾಡುತ್ತೀರಾ ?

† ಶ್ರೀ ಡಿ. ಕೆ. ನಾಯ್ಕರ್.—ನನಗೆ ಗೊತ್ತಿರುವ ಅಂಕಿ ಅಂಶಗಳ ಪ್ರಕಾರ ಈ ಪ್ರಶ್ನೆಗೆ ಕೊಟ್ಟಿರುವ ಉತ್ತರ ಸರಿಯಾಗಿದೆ ಎಂದು ನನ್ನ ಅಭಿಪ್ರಾಯ. ಈಗಾಗಲೇ ಆ ಗ್ರಾಮಕ್ಕೆ ನೀರನ್ನು ಒದಗಿಸಲಾಗಿದೆ. 1975ನೇ ಸಾಲಿನಲ್ಲಿ ಈ ಯೋಜನೆಯು ಮುಕ್ತಾಯವಾಗುತ್ತದೆ ಎಂದು ಚೀಫ್ ಇಂಜಿನಿಯರು ಮಾಹಿತಿಯನ್ನು ಕೊಟ್ಟಿದ್ದಾರೆ. ಗೊತ್ತುಪಡಿಸಿದ ಕಾರಾವಧಿಯೊಳಗಾಗಿ ಕಂಟ್ರಾಕ್ಟರು ಕೆಲಸವನ್ನು ಮಾಡಲಿಲ್ಲ. ಆದ್ದರಿಂದ ಅವರ ಮೇಲೆ ದಂಡ ಹಾಕಿ ಅದನ್ನು ವಸೂಲು ಮಾಡುವ ಕ್ರಮವನ್ನು ಕೈಗೊಳ್ಳಲಾಗಿದೆ.

ಶ್ರೀ ಜೆ. ಎಸ್. ಅಮ್ಮಣ್ಣನವರ್.—ಆ ಕೆಲಸವನ್ನು ಮಾಡುವುದಕ್ಕೆ ಒಪ್ಪಿಕೊಂಡ ಕಂಟ್ರಾಕ್ಟರು ಗೊತ್ತುಪಡಿಸಿದ ಕಾರಾವಧಿಯೊಳಗಾಗಿ ಕೆಲಸವನ್ನು ಮಾಡದೆ ಬಿಟ್ಟುಹೋದರೆ ಅವರ ಮೇಲೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲವೇ ? ಈ ಕೆಲಸವನ್ನು ಬೇರೆಯವರಿಗೆ ವಹಿಸುವುದಕ್ಕೆ ನಿಯಮದಲ್ಲಿ ಏನಾದರೂ ಅಡಚಣೆ ಇದ್ದರೆ ಅದನ್ನು ಮಾರ್ಪಾಡು ಮಾಡಿ ಕೂಡಲೇ ಆ ಕೆಲಸವನ್ನು ಬೇರೆ ಕಂಟ್ರಾಕ್ಟರಿಗೆ ವಹಿಸಿ ಆ ಕೆಲಸವನ್ನು ಮಾಡುವುದಕ್ಕೆ ವಿಚಾರ ಮಾಡುತ್ತೀರಾ !

ಶ್ರೀ ಡಿ. ಕೆ. ನಾಯ್ಕರ್.—ಈ ವಿಷಯದಲ್ಲಿ ಕೆಲವು ಟರ್ಮ್ಸ್ ಅಂಡ್ ಕಂಡೀಷನ್‌ಗಳು ಇರುತ್ತವೆ. ಅಗ್ರಿಮೆಂಟ್ ಪ್ರಕಾರ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಜೆ. ಎಲ್. ಕವಾಡಿ.—ಈ ಪ್ರಶ್ನೆಗೆ (ಉ) ನಲ್ಲಿ ಕೊಟ್ಟಿರುವ ಉತ್ತರವನ್ನು ನೋಡಿದರೆ ಈ ಯೋಜನೆಯು ಪೂರ್ತಿಯಾಗಿಲ್ಲ ಎಂದು ಅರ್ಥವಾಯಿತು. ಹೀಗಿರುವಾಗ ಮಾನ್ಯ ಮಂತ್ರಿಗಳು ನೀರು ಸರಬರಾಜು ಮಾಡುತ್ತೇವೆ. ಈ ಯೋಜನೆಯನ್ನು ಮುಗಿಸುತ್ತೇವೆ ಎಂದು ಹೇಳುವುದು ಸರಿಯೇ ! ಆದ್ದರಿಂದ ಮಾನ್ಯ ಮಂತ್ರಿಗಳು ದಯವಾಡಿ ಈ ಯೋಜನೆಯ ಬಗ್ಗೆ ಪೂರ್ತಿ ವಿವರ ಗಳನ್ನು ತರಿಸಿಕೊಂಡು ಒದಗಿಸುತ್ತೀರಾ ?

ಶ್ರೀ ಡಿ. ಕೆ. ನಾಯ್ಕರ್.—ಈಗಾಗಲೇ ನಾಲ್ಕು ಬೋರ್‌ವೆಲ್‌ಗಳನ್ನು ಹಾಕಿ ನೀರನ್ನು ಒದಗಿಸಲಾಗುತ್ತಿದೆ. ಹೀಗಿರುವಾಗ ನೀರನ್ನು ಕೊಟ್ಟಿಲ್ಲ ಎಂದು ಹೇಳುವುದು ಸರಿಯಲ್ಲ.

ಶ್ರೀ ಜೆ. ಎಸ್. ಅಮ್ಮಣ್ಣನವರ್.—ಬೋರ್‌ವೆಲ್‌ಗಳನ್ನು ಹಾಕಿದ್ದು ಕ್ಷಾಮ ಬಂದಾಗ. ಅದು ಎನ್. ಆರ್. ಡಬ್ಲ್ಯೂ ಯೋಜನೆಗೆ ಅನ್ವಯವಾಗುವುದಿಲ್ಲ. ಆದ್ದರಿಂದ ಬೇಗನೆ ಎನ್.ಆರ್. ಡಬ್ಲ್ಯೂ ಯೋಜನೆಯನ್ನು ಪೂರ್ತಿ ಮಾಡಿ ಬೇಗನೆ ಜನಗಳಿಗೆ ನೀರು ಸಿಕ್ಕುವಂತೆ ಮಾಡುತ್ತೀರಾ?

ಶ್ರೀ ಡಿ. ಕೆ. ನಾಯ್ಕರ್.—1975ನೇ ಇಸವಿ ಮಾರ್ಚ್ ತಿಂಗಳಲ್ಲಿ ಆ ಯೋಜನೆಯನ್ನು ಮುಗಿಸುತ್ತೇವೆ ಎಂದು ಚೀಫ್ ಇಂಜಿನಿಯರ್ ಹೇಳಿದ್ದಾರೆ. ಜನಗಳಿಗೆ ತೊಂದರೆಯಾಗಬಾರದು ಎಂದು ಬೋರ್‌ವೆಲ್ ಹಾಕಿ ಈಗ ಜನಗಳಿಗೆ ನೀರನ್ನು ಕೊಡರಾಗುತ್ತಿದೆ.

Chief Officers of Municipal Councils

47. Sri V. M. GHADI (Haliyal).—

Will the Minister for Law and Municipal Administration be pleased to state:—

(*a*) the number of Town Panchayats and Village Panchayats that have been converted into Town Municipal Councils ;

(*b*) whether regular Chief Officers are working in all these Municipal Councils ;

(*c*) if not, the reasons for the same and when these Officers will be appointed especially in North Kanara District ?

Sri D. K. NAIKAR (Minister for Law and Municipal Administration).—

(*a*) 54.

(*b*) No.

(*c*) Pending filling up posts of Chief Officers by regular Chief Officers the Government have directed the Divisional Commissioners to continue the Secretaries of the Town Panchayats or Village Panchayats as Chief Officers and where there are no Secretaries, appointments may be made by drafting the officials from the Revenue Department on temporary basis. This holds good even for North-Kanara District.

ಶ್ರೀ ವಿ. ಎಂ. ಘಾಡಿ.—54 ಟೌನ್ ಪಂಚಾಯಿತಿಗಳು ಹಾಗೂ ಗ್ರಾಮ ಪಂಚಾಯಿತಿಗಳನ್ನು ಟೌನ್ ಪುರಸಭಾ ಮಂಡಲಗಳಾಗಿ ಪರಿವರ್ತಿಸಲಾಗಿದೆಯೆಂದು ನನ್ನ (ಅ) ಪ್ರಶ್ನೆಗೆ ಉತ್ತರವಾಗಿ ಹೇಳಿದೆ. ಅವುಗಳಿಗೆ ಇನ್ನೂ ರೆಗ್ಯುಲರ್ ಚೀಫ್ ಆಫೀಸರುಗಳನ್ನು ನೇಮಕಮಾಡಿಲ್ಲ. ಕಾರಣ ಕೇಳಿದರೆ, ಮೊದಲಿದ್ದ ಕಾರ್ಯದರ್ಶಿಗಳೇ ಅಲ್ಲಿ ಮುಂದುವರಿಸಿದ್ದೇವೆಂದು ಹೇಳುತ್ತಾರೆ. ಅಂತಹ ಕಾರ್ಯದರ್ಶಿಗಳಿಂದ ಸುಗಮವಾಗಿ ಹಾಗೂ ಉತ್ತಮವಾಗಿ ಕೆಲಸಕಾರ್ಯಗಳು ನಡೆಯುವುದಿಲ್ಲವೆಂದು ನನ್ನ ಅಭಿಪ್ರಾಯ. ಅದಕ್ಕೆ ತಮ್ಮ ಉತ್ತರವೇನು ?

† ಶ್ರೀ ಡಿ. ಕೆ. ನಾಯ್ಕರ್.—ಕನ್‌ವರ್ಟೆಡ್ ಪಂಚಾಯಿತಿಗಳಲ್ಲಿ ಯಾವ ಕಾರ್ಯದರ್ಶಿಗಳು ಇದ್ದಾರೆಯೋ ಅವರನ್ನೇ ಮುಂದುವರಿಸಿದ್ದೇವೆ. ಎಲ್ಲಿ ಕಾರ್ಯದರ್ಶಿಗಳಿಲ್ಲವೋ ಅಂತಹ ಕಡೆಗಳಲ್ಲಿ ಚೀಫ್ ಆಫೀಸರನ್ನು ಡೆಪ್ಯುಟೇಷನ್ ಮೇಲೆ ಕೊಡಬೇಕೆಂಬ ಆಜ್ಞೆಯನ್ನು ಡಿವಿಷನರ್ ಕಮಿಷನರ್ ಅವರಿಗೆ ಕೊಟ್ಟಿದ್ದೇವೆ.